ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ,
ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು-560023.

ದೂರವಾಣಿ:080-23295510 ಇ-ಮೇಲ್:spmbeckar@gmail.com

ಸಂಖ್ಯೆ: ಬಿಇಸಿ/ಐಪಿಜಿ/202/2021 -22 ದಿನಾಂಕ: 13.12.2022

## ಸೂಚನಾ ಪತ್ರ

ವಿಷಯ: 2022-23ನೇ ಶೈಕ್ಷಣಿಕ ಸಾಲಿಗೆ ಸೇವಾನಿರತ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಸ್ನಾತಕೋತ್ತರ ವ್ಯಾಸಂಗಕ್ಕೆ (NEET-PG) ನಿಯೋಜಿಸುವ ಬಗ್ಗೆ.

*****

2022-23ನೇ ಸಾಲಿಗೆ ಸೇವಾನಿರತ ಕೋಟಾದಡಿ ಸ್ನಾತಕೋತ್ತರ ವ್ಯಾಸಂಗಕ್ಕೆ ಸೀಟು ಆಯ್ಕೆ ಮಾಡಿಕೊಳ್ಳುವ ಸೇವಾನಿರತ ವೈದ್ಯರುಗಳು ಇಲಾಖೆಯ ವೆಬ್‌ಸೈಟ್ https://karunadu.karnataka.gov.in/hfw ರಲ್ಲಿ ಪ್ರಕಟಿಸಿರುವಂತೆ ರೂ.300/- ಗಳ ಮುಖ ಬೆಲೆಯ ಒಂದು ಪ್ರತ್ಯೇಕ ಬಂಧಪತ್ರ ಹಾಗೂ ರೂ.100/-ಗಳ ಮುಖಬೆಲೆಯ ಎರಡು ಪ್ರತ್ಯೇಕ ಬಂಧಪತ್ರಗಳನ್ನು ಕೆಸಿಎಸ್‌ಆರ್ 61 ಮತ್ತು II ರ ಸಂಪೂರ್ಣ ಷರತ್ತಿಗೊಳಪಟ್ಟು ನಮೂನೆ 19, 19ಎ ಮತ್ತು ಪೆನಾಲ್ಟಿ ಬಂಧಪತ್ರಗಳ ಮಾದರಿ ಅಫಿಡವಿಟ್ ಪ್ರತಿಯನ್ನು ಮತ್ತು ಬಂಧಪತ್ರ ನಮೂನೆ ಪ್ರತಿಯನ್ನು ಪ್ರಕಟಿಸಲಾಗಿರುತ್ತದೆ. ಅದರಂತೆ ನಿಯಮನುಸಾರ ಪರಿಶೀಲಿಸಿ, ಸೂಕ್ತ ಬಂಧಪತ್ರಗಳನ್ನು ಒದಗಿಸಲು ಸೂಚಿಸಿದೆ.

1. ಬಂಧಪತ್ರಗಳನ್ನು ಖರೀದಿಸುವಾಗ 1ನೇ ಪಾರ್ಟಿ ಅಭ್ಯರ್ಥಿಯ ಹೆಸರು ಮತ್ತು 2ನೇ ಪಾರ್ಟಿ HFW Government of Karnataka (ಆಕುಕ ಕರ್ನಾಟಕ ಸರ್ಕಾರ) ಎಂದು ನಮೂದಿಸಿರುವಂತೆ ಬಂಧಪತ್ರಗಳನ್ನು ಪಡೆಯುವುದು.
2. ಬಂಧಪತ್ರಗಳನ್ನು ನೀಡುವಾಗ ನಮೂನೆ 19ರ ಬಂಧಪತ್ರದಲ್ಲಿ ಮತ್ತು ಪೆನಾಲ್ಟಿ ಬಂಧಪತ್ರದಲ್ಲಿ ನಮೂದಿಸುವ ಪೆನಾಲ್ಟಿ ಮೊತ್ತಗಳನ್ನು ಸ್ನಾತಕೋತ್ತರ ಪದವಿ/ಡಿಪ್ಲೋಮಾ ಮತ್ತು ಡಿಎನ್‌ಬಿ ಸೀಟು ಆಯ್ಕೆ ಮಾಡಿಕೊಂಡಿರುವವರು ಅವರಿಗೆ ಅನ್ವಯವಾಗುವ ದಂಡದ ಮೊತ್ತವನ್ನು ಮಾತ್ರ ನಮೂದಿಸಬೇಕು.
3. ಬಂಧಪತ್ರಗಳನ್ನು ಸಲ್ಲಿಸುವಾಗ ಮೊದಲನೇ ಕಕ್ಷಿದಾರರಾಗಿ ಸಂಬಂಧಪಟ್ಟ ವೈದ್ಯರ ಹೆಸರನ್ನು ಹಾಗೂ ಎರಡನೇ ಕಕ್ಷಿದಾರರಾಗಿ ಆರೋಗ್ಯ ಮತ್ತು ಕು.ಕ. ಸೇವೆಗಳು ಕರ್ನಾಟಕ ಸರ್ಕಾರ, ಬೆಂಗಳೂರು ಎಂದು ನಮೂದಿಸತಕ್ಕದು.
4. ಬಂಧಪತ್ರದಲ್ಲಿ ಸ್ನಾತಕೋತ್ತರ ಪದವಿ/ಡಿಪ್ಲೋಮಾ ಮತ್ತು ಡಿಎನ್‌ಬಿ ವ್ಯಾಸಂಗದ ನಂತರ 10 ವರ್ಷ ಸೇವೆ ಸಲ್ಲಿಸುವುದಾಗಿ ನಮೂದಿಸುವುದು ಕಡ್ಡಾಯವಾಗಿರುತ್ತದೆ. ಒಂದು ವೇಳೆ 10 ವರ್ಷ ಸೇವೆ ಸಲ್ಲಿಸದೇ ಇದ್ದಲ್ಲಿ ಡಿಪ್ಲೋಮಾ ವ್ಯಾಸಂಗ ನಿರ್ವಹಿಸುವವರಿಗೆ ರೂ. 25,00,000/- ಲಕ್ಷ ರೂಪಾಯಿಗಳ ದಂಡ ಹಾಗೂ ಸ್ನಾತಕೋತ್ತರ ಪದವಿ ವ್ಯಾಸಂಗ ನಿರ್ವಹಿಸುವವರಿಗೆ ರೂ. 50,00,000/- ಲಕ್ಷ ರೂಪಾಯಿಗಳ ದಂಡ ವಿಧಿಸಲಾಗುವುದು. ಸದರಿ ದಂಡದ ಮೊತ್ತ ವಸೂಲಿಗಾಗಿ ಅವಶ್ಯಕತೆ ಕಂಡುಬಂದಲ್ಲಿ ಸ್ಥಿರ ಆಸ್ತಿಗಳ ಮೇಲೆ ವಸೂಲಿ ಮಾಡುವ ಸಂಬಂಧ ಸದರಿ ವೈದ್ಯರು ಸೂಕ್ತ ಮೌಲ್ಯಯುಳ್ಳ ಆಸ್ತಿವಂತರಾಗಿರಬೇಕು ಇವರುಗಳು ತಮ್ಮ ಸ್ಥಿರಾಸ್ತಿಯ ದಾಖಲೆ/ಸೇಲ್‌ಡೀಡ್/ಖಾತಾ ಕಂದಾಯ ಪ್ರಮಾಣ ಪತ್ರ ಹಾಗೂ ಇತರೇ ಮಾಹಿತಿಯುಳ್ಳ ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು ಒಂದು ವೇಳೆ ಮೇಲಿನಂತೆ ದಂಡ ಪಾವತಿಸದೇ ಇದ್ದಲ್ಲಿ ಮೊದಲನೆಯ ಹಂತದಲ್ಲಿ ಸದರಿ ವೈದ್ಯರಿಗೆ 2 ನೋಟೀಸ್ ಮತ್ತು ಅಂತಿಮ ನೋಟೀಸ್ ನೀಡಲಾಗುವುದು. ಸದರಿ ನೋಟೀಸಿಗೆ ಸ್ಪಂದಿಸದೇ ಇದ್ದಲ್ಲಿ 2ನೇ ಹಂತದಲ್ಲಿ ಜಾಮೀನುದಾರರಿಗೆ 2 ನೋಟೀಸ್ ಮತ್ತು ಅಂತಿಮ ನೋಟೀಸ್ ಜಾರಿ ಮಾಡಲಾಗುವುದು. 3ನೇ ಹಂತದಲ್ಲಿ ವೈದ್ಯರು ಮತ್ತು ಜಾಮೀನುದಾರರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು, ದಂಡದ ಮೊತ್ತವನ್ನು ವಸೂಲಿ ಮಾಡಲು ಕಾನೂನು ಕ್ರಮಕೈಗೊಳ್ಳಲಾಗುವುದು ಹಾಗೂ ವೈದ್ಯರ ಕೆಎಂಸಿ ನೋಂದಣಿಯನ್ನು ರದ್ದುಗೊಳಿಸಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುವುದು.
5. ಜಾಮೀನುದಾರರಾಗಿ ಸಹಿ ಮಾಡುವವರು, ಒಬ್ಬ ಸೇವಾನಿರತ ಸ್ನಾತಕೋತ್ತರ ವೈದ್ಯರಿಗೆ ಮಾತ್ರ ಸಹಿ ಮಾಡುವ ಷರತ್ತಿಗೊಳಪಟ್ಟಿರುತ್ತದೆ. ಜಾಮೀನುದಾರರಾಗಿ ಸಹಿ ಮಾಡುವವರು ಭಾವಚಿತ್ರದ ಸಮೇತ ಬಂಧಪತ್ರದಲ್ಲಿ ಆಧಾರ್ ಕಾರ್ಡ್/ಚುನಾವಣಾ ಗುರುತಿನ ಚೀಟಿ/ವಾಹನ ಚಾಲನ ಪರವಾನಗಿ/ಪಾಸ್‌ಪೋರ್ಟ್‌ನ ಸಂಖ್ಯೆಯನ್ನು ನಮೂದಿಸಿ ಸಹಿ ಮಾಡುವುದು. ಆಧಾರ್ ಕಾರ್ಡ್/ಚುನಾವಣಾ ಗುರುತಿನ ಚೀಟಿ/ವಾಹನ ಚಾಲನ ಪರವಾನಗಿ/ಪಾಸ್‌ಪೋರ್ಟ್ ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು.
6. ಜಾಮೀನು ನೀಡುವವರು ರಾಜ್ಯ/ಕೇಂದ್ರ ಸರ್ಕಾರಿ ನೌಕರರು ಇತರೇ ವೇತನದಾರರಾಗಿದ್ದರೆ ಸಂಬಂಧಪಟ್ಟ ಸಂಸ್ಥೆಯಿಂದ ದೃಢೀಕೃತ ವೇತನ ಪ್ರಮಾಣ ಪತ್ರದೊಂದಿಗೆ ಬಂಧಪತ್ರಗಳನ್ನು ಸಲ್ಲಿಸಲು ಸೂಚಿಸಲಾಗಿದೆ.
7. ಸೇವಾನಿರತ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳು ಭಾವಚಿತ್ರದ ಸಮೇತ ತಮ್ಮ ಕೆಜಿಐಡಿ ಸಂಖ್ಯೆ ಹಾಗೂ ಜಾಮೀನುದಾರರು ರಾಜ್ಯ ಸರ್ಕಾರಿ ನೌಕರರಾಗಿದ್ದಲ್ಲಿ ಕೆಜಿಐಡಿ ಸಂಖ್ಯೆಯನ್ನು ಹಾಗೂ ಆಧಾರ್ ಕಾರ್ಡ್ ಸಂಖ್ಯೆಯನ್ನು ಕಡ್ಡಾಯವಾಗಿ ಎಲ್ಲಾ (ಮೂರು) ಬಂಧಪತ್ರದಲ್ಲಿ ನಮೂದಿಸುವುದು.

8. ಕರ್ನಾಟಕ ಪರೀಕ್ಷಾ ಪ್ರಾಧಿಕಾರದವರ ಮೊದಲನೆ ಮತ್ತು ಎರಡನೆ ಸುತ್ತಿನ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ಸೇವಾನಿರತ ವೈದ್ಯರುಗಳು ಅಂತಿಮವಾಗಿ ನಿರ್ಧರಿಸಿ ಪಡೆದ ಸೀಟು ಮತ್ತು ವಿದ್ಯಾಲಯ ಆಯ್ಕೆಯ ನಂತರ ಸರ್ಕಾರದ ಆದೇಶದನುಸಾರ ಮೇಲ್ಕಂಡ ಬಂಧಪತ್ರಗಳನ್ನು ಕಡ್ಡಾಯವಾಗಿ ಖುದ್ದು ಹಾಜರಾಗಿ ಸಲ್ಲಿಸತಕ್ಕದ್ದು. ಬಂಧಪತ್ರಗಳು ಕ್ರಮಬದ್ಧವಾಗಿ ಸಲ್ಲಿಸದೇ ಇದ್ದಲ್ಲಿ ಕರ್ತವ್ಯದಿಂದ ಬಿಡುಗಡೆ ಮಾಡಲು ಅನುಮತಿ ಪತ್ರ ನೀಡಲು ಅವಕಾಶವಿರುವುದಿಲ್ಲ.
9. ಕಳೆದ ಮೂರು ವರ್ಷಗಳಲ್ಲಿ ವ್ಯಾಸಂಗಕ್ಕೆ ಆಯ್ಕೆಯಾಗಿ ವ್ಯಾಸಂಗ ನಿರ್ವಹಿಸುತ್ತಿರುವ ಸೇವಾನಿರತ ವೈದ್ಯರುಗಳು ಜಾಮೀನುದಾರರಾಗಿ ಸಹಿ ಮಾಡುವಂತಿಲ್ಲ. ಒಬ್ಬ ಸೇವಾನಿರತ ಸ್ನಾತಕೋತ್ತರ ವೈದ್ಯರುಗಳಿಗೆ ಜಾಮೀನುದಾರರಾಗಿ ಸಹಿ ಮಾಡಿ ತದ ನಂತರ ಮತ್ತೊಬ್ಬರಿಗೆ ಸಹ ಜಾಮೀನುದಾರರಾಗಿ ಸಹಿ ಮಾಡಿದಲ್ಲಿ ಆ ಇಬ್ಬರು ವೈದ್ಯರುಗಳ ಬಂಧಪತ್ರವನ್ನು ಪರಿಗಣಿಸುವುದಿಲ್ಲ ಹಾಗೂ ಆ ಎರಡೂ ಬಂಧಪತ್ರಗಳು ತಿರಸ್ಕೃತಗೊಳ್ಳುತ್ತದೆ.
10. ಸರ್ಕಾರದ ನಿಯೋಜನೆ ಆದೇಶ ಪಡೆದು ವ್ಯಾಸಂಗಕ್ಕೆ ಹಾಜರಾದ ವೈದ್ಯರುಗಳು, ವ್ಯಾಸಂಗಕ್ಕೆ ಹಾಜರಾದ ಸಿಟಿಸಿ ಪ್ರತಿಗಳನ್ನು 3 ದಿನದೊಳಗಾಗಿ ಆಯುಕ್ತಾಲಯಕ್ಕೆ ಮುದ್ದಾಂ ಸಲ್ಲಿಸಲು ಸೂಚಿಸಿದೆ. ತಪ್ಪಿದ್ದಲ್ಲಿ ನಿಮ್ಮ ವೇತನ ಮತ್ತು ಭತ್ಯೆಗಳನ್ನು ಪಡೆಯಲು ಹೊರಡಿಸುವ ಪ್ರತಿ ನಿಯೋಜನಾ ಆದೇಶವನ್ನು ಹೊರಡಿಸಲು ವಿಳಂಬವಾಗುತ್ತದೆ. ಸದರಿ ವಿಳಂಬಕ್ಕೆ ನೀವೇ ನೇರ ಹೊಣೆಗಾರರಾಗಿರುತ್ತೀರಿ.
11. ಆಯ್ಕೆಯಾದ ವೈದ್ಯರು ಬಂಧಪತ್ರದಲ್ಲಿ ಕೆಎಂಸಿ ರಿಜಿಸ್ಟರ್ ಸಂಖ್ಯೆ ಹಾಗೂ ಆಧಾರ್ ಕಾರ್ಡ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಬೇಕು.
12. ಆಯ್ಕೆಯಾದ ವೈದ್ಯರು ಬಂಧಪತ್ರದಲ್ಲಿ ಆಯ್ಕೆ ಮಾಡಿಕೊಂಡ ವಿಷಯ, ಕಾಲೇಜು ಮತ್ತು ಸರ್ಕಾರದಿಂದ ಆಯ್ಕೆಗೊಂಡ ಬಗ್ಗೆ ಹೊರಡಿಸಲಾದ ಆದೇಶ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸುವುದು.
13. ಬಂಧಪತ್ರ 19, 19ಎ ಮತ್ತು ಪೆನಾಲ್ಟಿ ಬಾಂಡ್ ಮತ್ತು ಅಫಿಡವಿಟ್‌ನ್ನು ಎಲ್ಲಾ ಅಗತ್ಯ ಮಾಹಿತಿಗಳನ್ನು ಕ್ರಮಬದ್ಧವಾಗಿ ನಮೂದಿಸಿ ನೋಟರಿರವರ ದೃಢೀಕರಣದೊಂದಿಗೆ ಸಂಬಂಧಪಟ್ಟ ವೈದ್ಯರು ಕಡ್ಡಾಯವಾಗಿ ಬಂಧಪತ್ರಕೋಶ ವಿಭಾಗಕ್ಕೆ ಖುದ್ದು ಹಾಜರಾಗಿ ಸಲ್ಲಿಸತಕ್ಕದು.
14. ಕ್ರ.ಸಂ. 1 ರಿಂದ 13ರವರೆಗಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಕ್ರಮಬದ್ಧವಾಗಿ ಸೂಕ್ತ ಮಾಹಿತಿ ಹಾಗೂ ಅಗತ್ಯ ದಾಖಲಾತಿಗಳನ್ನು ಒದಗಿಸಿ ಕರ್ತವ್ಯದಿಂದ ಬಿಡುಗಡೆ ಹೊಂದಲು ಅನುಮತಿ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ. ಬಂಧಪತ್ರವನ್ನು ಕ್ರಮಬದ್ಧವಾಗಿ ಸಲ್ಲಿಸದಿದ್ದಲ್ಲಿ ಬಿಡುಗಡೆ ಹೊಂದಲು ಹಾಗೂ ಅನುಮತಿ ಪತ್ರವನ್ನು ಪಡೆಯಲು ಅರ್ಹರಾಗಿರುವುದಿಲ್ಲ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮತ್ತು ಅನಗತ್ಯವಾಗಿ ಕಛೇರಿಯ ಕೆಲಸಗಳಿಗೆ ಅಡ್ಡಿಪಡಿಸದಂತೆ, ಕ್ರಮವಹಿಸಲು ಸೂಚಿಸಿದೆ.

ಆಯುಕ್ತರು, 13.12.22.
ಆರೋಗ್ಯ ಮತ್ತು ಕು.ಕ. ಸೇವೆಗಳು
ಬೆಂಗಳೂರು.

<u>ಪ್ರತಿಯನ್ನು:-</u>

ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು/
ಜಿಲ್ಲಾ ಶಸ್ತ್ರಚಿಕಿತ್ಸಕರು, ಬೆಂಗಳೂರು ನಗರ/
ಬೆಂಗಳೂರು ಗ್ರಾಮಾಂತರ/ಚಿತ್ರದುರ್ಗ/ದಾವಣಗೆರೆ/
ಕೋಲಾರ/ಶಿವಮೊಗ್ಗ/ಚಿಕ್ಕಬಳ್ಳಾಪುರ/ರಾಮನಗರ/
ತುಮಕೂರು/ ಮೈಸೂರು/ ಚಿಕ್ಕಮಗಳೂರು/ಮಂಡ್ಯ/
ಮಂಗಳೂರು(ದ.ಕ)/ಚಾಮರಾಜನಗರ/ಕೊಡಗು/ಹಾಸನ/
ಉಡುಪಿ/ಬೆಳಗಾವಿ/ಬಾಗಲಕೋಟೆ/ವಿಜಯಪುರ/ಧಾರವಾಡ/ಗದಗ/
ಹಾವೇರಿ/ಕಾರವಾರ(ಉ.ಕ.)ಚಿಕ್ಕೋಡಿ ಅಪರ ಜಿಲ್ಲೆ, ಕಲಬುರಗಿ/ಕೊಪ್ಪಳ/
ಬೀದರ್/ಬಳ್ಳಾರಿ/ವಿಜಯನಗರ/ರಾಯಚೂರು/ಯಾದಗಿರಿ/
ಪ್ರಾಂಶುಪಾಲರು, _______________ ತರಬೇತಿ ಕೇಂದ್ರ _______________
ಜಿಲ್ಲೆ/ವೈದ್ಯಕೀಯ ಅಧೀಕ್ಷಕರು, _______________ ಆಸ್ಪತ್ರೆ,
_______________________ಜಿಲ್ಲೆ/ಸಹನಿರ್ದೇಶಕರು, _______________

ಹಿರಿಯ ಕಾರ್ಯಕ್ರಮಾಧಿಕಾರಿಗಳು, ಗಣಕಯಂತ್ರ ವಿಭಾಗ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರಿಗೆ ರವಾನಿಸುತ್ತಾ ಈ ಮಾಹಿತಿಯನ್ನು ಈ ಕೂಡಲೇ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಿದೆ.